ಓ.ಎಸ್.96/2021 ಪಿ.ಡಬ್ಲು-1
*ಶರಣಪ್ಪ ತಂದೆ ಕುಪ್ಪಣ್ಣ*

ದಿ.17-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು ಶ್ರೀ ಎಮ್.ಆರ್ ವಕೀಲರಿಂದ :-</u>**

ಈ ಕೇಸು ಹಾಕುವ ಮುಂಚೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಚೆಕ್ಕುಬಂದಿ ತಿದ್ದುಪಡಿಗಾಗಿ ದಾವೆ ಹಾಕಿದ್ದೆ ಎಂದರೆ ಸರಿ. ಸದರಿ ದಾವೆ ಸಂಖ್ಯೆ 257/2013 ಇರುತ್ತದೆ. ಸದರಿ ದಾವೆಯಲ್ಲಿ ಘೋಷಣೆ ಮತ್ತು ತಿದ್ದುಪಡಿಗಾಗಿ ದಾವೆ ಸಲ್ಲಿಸಿದ್ದೆ. ಆದಪ್ಪ ಎನ್ನುವವರು ನಮ್ಮ ಜಾಗದಲ್ಲಿ 3 ಫೀಟ್ ಸ್ಲೋಪ್ ಹಾಕಿದ್ದಕ್ಕೆ ನಾನು ಈ ದಾವೆ ಸಲ್ಲಿಸಿರುತ್ತೇನೆ. ಓ.ಎಸ್.ನಂ.257/2013 ಡಿಕ್ರಿ ಏನಾಗಿರುತ್ತದೆ ಎಂದು ನನಗೆ ಗೊತ್ತಿದೆ. ಪ್ರತಿವಾದಿಗಳು ಖರೀದಿ ಪತ್ರದಲ್ಲಿ ಆದ ತಪ್ಪುಗಳನ್ನು ತಿದ್ದುಪಡಿ ಮಾಡಿ ರೆಜಿಸ್ಟರ್ ಮಾಡಿಕೊಡಬೇಕೆಂದು ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಆ ಡಿಕ್ರಿಯಲ್ಲಿ ಖರೀದಿ ಪತ್ರವನ್ನು ನೊಂದಣಿ ಕಚೇರಿಗೆ ಪ್ರತಿವಾದಿಯರು ಬಂದು ತಿದ್ದುಪಡಿ ಮಾಡಿಕೊಟ್ಟಿಲ್ಲ. ನೊಂದಣಿ ಕಚೇರಿಯವರು ನ್ಯಾಯಾಲಯದ ಆದೇಶದ ಪ್ರಕಾರ ನಮಗೆ ತಿದ್ದುಪಡಿ ಮಾಡಿಕೊಟ್ಟಿರುತ್ತಾರೆ. ತಿದ್ದುಪಡಿ ಮಾಡಿದ ಪ್ರತಿಯನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತೇನೆ. ಉಪನೊಂದಣಿ ಕಚೇರಿಯಲ್ಲಿನ ಬುಕ್ ನಂ.1 ರಲ್ಲಿ ತಿದ್ದುಪಡಿ ಆದ ಬಗ್ಗೆ ನಮೂದು ಆಗಿಲ್ಲ ಹಾಗೂ ಅದರ ದೃಡಿಕೃತ ನಕಲನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಓ.ಎಸ್.ನಂ.10/1990 ರ ಮತ್ತು ಆರ್.ಎ.ನಂ.102/2000 ರ ಪ್ರತಿಗಳನ್ನು ಹಾಜರು ಪಡಿಸಿರುತ್ತೇನೆ. ಖರೀದಿ ಪತ್ರದ ಅಸಲು ಪ್ರತಿಯನ್ನು ಓ.ಎಸ್.ನಂ.257/2013 ರಲ್ಲಿ ಸಲ್ಲಿಸಿದ್ದು ಅದರ ದೃಡಿಕೃತ ನಕಲನ್ನು ತೆಗೆಯಿಸಿ ಈ ಕೇಸಿನಲ್ಲಿ ಹಾಕಿರುತ್ತೇನೆ. ಆದಮ್ಮ ಕಟ್ಟುತ್ತಿರುವ ಜಾಗದ ಪೂರ್ವ ದಿಕ್ಕಿಗೆ ಅವರದೇ ಜಾಗ ಇರುತ್ತದೆ ಎಂದರೆ ಸರಿ. ಆದಮ್ಮ ಕಟ್ಟಡ ಕಟ್ಟಲು ಪರವಾನಿಗೆಯನ್ನು ಪುರಸಭೆಯಿಂದ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆದಮ್ಮರವರು ಪುರಸಭೆಯಿಂದ ಪರವಾನಿಗೆ ಪಡೆದಿಲ್ಲ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ಆದರೆ ಪುರಸಭೆಯವರು ಬಾಯಿ ಮಾತಿನಿಂದ ಹೇಳಿರುತ್ತಾರೆ.

2. ನಾನು ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತಿಯಾಗಿರುತ್ತೇನೆ. ಪೋಲಿಸ್ ಅಧಿಕಾರವನ್ನು ಉಪಯೋಗಿಸಿ ಪರವಾನಿಗೆ ಪಡೆದಿದ್ದರೂ ಸಹ ಕಟ್ಟಡ ಕಟ್ಟುವುದನ್ನು ಬಂದ್ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ಯಾವುದೇ ಕಟ್ಟಡ ಕಟ್ಟಿರುವುದಿಲ್ಲ ನಾವು ಕಲ್ಲು ಹಾಕಿ ದನ-ಕರುಗಳನ್ನು ಕಟ್ಟಿರುತ್ತೇವೆ. ಪ್ರತಿವಾದಿಯರು ನನ್ನ ಜಾಗದಲ್ಲಿ 3 ಅಡಿ ಸಜ್ಜೆ ಹಾಕಿರುತ್ತಾರೆ. ಅವರು ಯಾವುದೇ 3 ಅಡಿ ಜಾಗವನ್ನು ಒತ್ತುವರಿ

ಮಾಡಿಲ್ಲ ಪ್ರತಿವಾದಿಯರು ಮುಂದೆ ತೊಂದರೆ ಕೊಡಬಹುದು ಎಂದು ಸುಳ್ಳು ಕಥೆ ಕಟ್ಟಿ ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಕಟ್ಟಡ ಕಟ್ಟುವುದನ್ನು ನಾನು ನ್ಯಾಯಾಲಯದ ತಡೆಯಾಜ್ಞೆಯನ್ನು ತೋರಿಸಿ ಬಂದ್ ಮಾಡಿಸಿರುತ್ತೇನೆ. ನಾನು ಪುರಸಭೆಯವರಿಗೆ ಯಾವುದೇ ತಕರಾರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ತಕರಾರಿನ ಪ್ರತಿಯನ್ನು ನ್ಯಾಯಾಲಯದಲ್ಲಿ ಕೊಟ್ಟಿರುತ್ತೇನೆ. ಪ್ರತಿವಾದಿಯರು ತಮ್ಮ ಜಾಗದಲ್ಲಿ ಮನೆ ಕಟ್ಟುತ್ತಿದ್ದರೂ ಸಹ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸಲು ನನಗೆ ಯಾವುದೇ ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.